**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 288 ವೆಚ್ಚ 6/2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:03-05-2017

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು.

ಇವರಿಗೆ,
ನಿರ್ದೇಶಕರು,
ಖಜಾನೆ ನಿರ್ದೇಶನಾಲಯ,
ಬೆಂಗಳೂರು.
ಉಪ ನಿರ್ದೇಶಕರು
ಖನಿಜ ಭವನ, ಬಸವೇಶ್ವರ ರಸ್ತೆ,
ಬೆಂಗಳೂರು.

ಮಾನ್ಯರೇ,

ವಿಷಯ: ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ನಿಧಿ-3ರಡಿ ವೆಚ್ಚವನ್ನು ಭರಿಸುವ ಬಗ್ಗೆ -
ಉಲ್ಲೇಖ: ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹೊಸಕೋಟೆ ಇವರ ಪತ್ರ ದಿನಾಂಕ:22.4.2017

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನಿಧಿ-3 ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ಸ್ವಂತ ನಿಧಿಯಾಗಿದ್ದು, ನಿಧಿ-3ರಡಿ ಜಮೆಯಾಗಿರುವ ರಾಜಸ್ವಗಳಿಗೆದುರಾಗಿ ಆಯವ್ಯಯ ನಿಯಂತ್ರಣ ಮತ್ತು ವೆಚ್ಚ ಮಾಡಲು ಲೆಕ್ಕ ಶೀರ್ಷಿಕೆ 2515-00-001-0-02(ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ) ಖಜಾನೆಯ ಡಾಟಾ ಬೇಸ್‌ನಲ್ಲಿ ಮ್ಯಾಪಿಂಗ್ ಮಾಡಲಾಗಿದೆ. ಪ್ರಸ್ತುತ ಖಜಾನೆ ಲೆಕ್ಕಪತ್ರಗಳಲ್ಲಿ ಪೂರ್ಣವಾಗಿ ಆಯವ್ಯಯ ನಿಯಂತ್ರಣವನ್ನು ಅಳವಡಿಸಿದ್ದು, ನಿಧಿ-3 ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ಸ್ವಂತ ನಿಧಿಯಾಗಿದ್ದು 2515-00-001-0-02ರಡಿ ವೆಚ್ಚ ಭರಿಸಲು ಖಜಾನೆಗಳ ಗಣಕೀಕರಣ ಲೆಕ್ಕ ಪದ್ಧತಿಯಲ್ಲಿ ಆಯವ್ಯಯ ನಿಯಂತ್ರಣದಿಂದ ಹೊರಗೆ ಈ ಲೆಕ್ಕ ಶೀರ್ಷಿಕೆಯನ್ನು ಇಡಬೇಕಾಗಿರುತ್ತದೆ. ಈ ಲೆಕ್ಕ ಶೀರ್ಷಿಕೆ ಕೇವಲ ನಿಧಿ-3ರಿಂದ ಖಜಾನೆ ಗಣಕೀಕರಣ ವ್ಯವಸ್ಥೆಯಲ್ಲಿ ಹಣ ಸೆಳೆಯಲು ಮಾತ್ರ ಉಪಯುಕ್ತವಾಗುತ್ತದೆ ಹಾಗೂ ಲೆಕ್ಕಪತ್ರ ವ್ಯವಸ್ಥೆಯಲ್ಲಿ ಗುರುತಿಸಲು ಉಪಯುಕ್ತವಾಗಿರುತ್ತದೆ. ಖಜಾನೆ-2 ಪದ್ಧತಿಯು ಪಂಚಾಯತ್‌ರಾಜ್ ಸಂಸ್ಥೆಗಳಿಗೂ ಅಳವಡಿಸುವವರೆಗೆ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ನಿಧಿ-3ರಲ್ಲಿ ವೆಚ್ಚ ಭರಿಸಲು ಮೇಲ್ಕಂಡ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆಯನ್ನು ಲಿಂಕ್ ಮಾಡಲು ಮತ್ತು ನಿಧಿ-3ರಿಂದ ಹಣ ಸೆಳೆಯಲು ಅಗತ್ಯ ಕ್ರಮವಹಿಸುವಂತೆ ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರಕ್ಕೆ ಸೂಕ್ತ ನಿರ್ದೇಶನ ನೀಡಲು ತಮ್ಮನ್ನು ಕೋರುವಂತೆ ನಿರ್ದೇಶಿತನಾಗಿದ್ದೇನೆ.

(ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ)
ಆರ್ಥಿಕ ಇಲಾಖೆರವರಿಂದ ಅನುಮೋದಿತ)

ನಿಮ್ಮ ನಂಬುಗೆಯ

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿಗಳು (ಜಿ.ಪಂ.)
ಆರ್ಥಿಕ ಇಲಾಖೆ

ಪ್ರತಿಯನ್ನು:
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ಮುಖ್ಯ ಲೆಕ್ಕಾಧಿಕಾರಿ/ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ನಿಯಮಾನುಸಾರ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆಯೊಂದಿಗೆ ಖಜಾನೆಗೆ ಬಿಲ್ಲು ಸಲ್ಲಿಸುವ ಸಲುವಾಗಿ